# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570 006

ದಿನಾಂಕ 26-12-2019ರಂದು ಅಪರಾಹ್ನ 12:30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ 53ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಡಾ. ತೇಜಸ್ವಿ ನವಿಲೂರು**<br>ಡೀನ್ (ಶೈಕ್ಷಣಿಕ) (ಕಾ.ಛಾ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ – ಅನುಪಸ್ಥಿತರು**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ. ಕವಿತ ರೈ**<br>ಕುಲಸಚಿವ (ಪರೀಕ್ಷಾಂಗ) (ಕಾ.ಛಾ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ|| ಪ್ರಭುಸೇನ ಡಿ. – ಅನುಪಸ್ಥಿತರು**<br>ಡೀನ್ (ಅಧ್ಯಯನ ಕೇಂದ್ರಗಳು) (ಕಾ.ಛಾ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ|| ಲಕ್ಷ್ಮಿ.ಎಸ್**<br>ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗೂ<br>ಸಂಶೋಧನಾ ವಿಭಾಗ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | |
| **ವಿಶೇಷ ಆಹ್ವಾನಿತರು** | |
| **ಡಾ|| ನಿರಂಜನ್ ರಾಜ್**<br>CIQA ನಿರ್ದೇಶಕರು<br>ಕರಾಮುವಿ, ಮೈಸೂರು. | |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 53ನೇ ಶೈಕ್ಷಣಿಕ ಮಂಡಳಿ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

ಕುಲಸಚಿವರು                ಕುಲಪತಿಗಳು

ವಿಷಯ ಸಂಖ್ಯೆ: 53.01

**ವಿಷಯ: 2019–20ನೇ ಸಾಲಿನ ಜನವರಿ ಆವರ್ತನ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಿರುವ ಬಗ್ಗೆ.**

*****

2019–20ನೇ ಸಾಲಿನ ಜನವರಿ ಆವರ್ತನ ಪ್ರವೇಶಾತಿ ಪ್ರಾರಂಭಿಸುವ ಸಲುವಾಗಿ ಈ ಕೆಳಕಂಡ ಕೋರ್ಸ್‌ಗಳ ವಿವರಣಾ ಪುಸ್ತಕಗಳನ್ನು 2017ರ ಯು.ಜಿ.ಸಿ ನಿಯಮಾವಳಿಯ ಪ್ರಕಾರ ಸಿದ್ಧಪಡಿಸಿ ವಿವಿನಿಲಯದ ವೆಬ್‌ಸೈಟ್‌ನಲ್ಲಿ **(www.ksoumysuru.ac.in)**ನಲ್ಲಿ ಪ್ರಕಟಿಸಲಾಗಿದೆ.

| ಕ್ರ. ಸಂ | ಅಧ್ಯಯನ ವಿಭಾಗಗಳು | ಶಿಕ್ಷಣಕ್ರಮಗಳು |
|---|---|---|
| 01 | | **B.A, B.Com.,** Programmes |
| 02 | | B.Ed. Education |
| 03 | | **M.A:** (Kannada, English, Hindi, Sanskrit, Urdu, History, Economics, Political Science, Public Administration, Sociology, Ancient History and Archeology, Journalism and Mass Communication). |
| 04 | | **M.Com** |
| 05 | | **M.Sc.:** (Bio-Chemistry, Bio-Technology, Chemistry, Clinical Nutrition and Dietetics, Environmental Science, Computer Science, Geography, Information Science, Mathematics, Micro Biology, Physics, Psychology) |
| 06 | | **B.Lib.I.Sc and M.Lib.I.Sc** Programmes |
| 07 | | **MBA** Programme |
| 08 | Department of Studies and Research in English | Graduate Diploma in English (PGDE) |
| 09 | Department of Studies and Research in Management | Post - Graduate Diploma in Human Resource Management (PGDHRM), |
| 10 | Department of Studies and Research in Commerce | Post - Graduate Diploma in Financial Management (PGDFM), Post – Graduate Diploma in Business Administration (PGDBA), Post – Graduate Diploma in Marketing Management (PGDMM), Post–Graduate Diploma in Business Law (PGDBL), |
| 11 | Department of Studies and Research in Food Science and Nutrition | Post - Graduate Diploma in Nutrition and Deitetics (PGDND),<br>Diploma in Nutrition and Health Education (DNHE),<br>Certificate in Nutrition and Food (CNF) |
| 12 | Department of Studies and Research in Journalism and Mass Communication | Post - Graduate Diploma in Journalism and Mass Communication (PGDJMC),<br>Diploma in Journalism (DIJ), |

ಕುಲಸಚಿವರು

ಕುಲಪತಿಗಳು

| | | |
|---|---|---|
| 13 | Department of Studies and Research in Kannada | Post - Graduate Diploma in Kuvempu Sahithya (PGDKS),<br>Diploma in Kannada (DIK),<br>Certificate in Kannada (CIK), Certificate in Panchayath Raj (CPR), |
| 14 | Department of Studies in Information Scence | Post – Graduate Diploma in Information Science (PGDIS), Post - Graduate Diploma in Computer Application (PGDCA),<br>Diploma in Information Science (DIS),<br>Diploma in Computer Application (DCA) |
| 15 | Department of Studies and Research in History | Post – Graduate Diploma in Ambedkar Studies (PGDAS) |

ಪ್ರತಿಯೊಂದು ಶೈಕ್ಷಣಿಕ ಕಾರ್ಯಕ್ರಮದ ವಿವರಗಳನ್ನು ಆಧ್ಯಾದೇಶಗಳ ಪ್ರಕಾರ ಸಿದ್ಧಪಡಿಸಲಾಗಿದೆ. ಸದರಿ ವಿವರಣಾ ಪುಸ್ತಕಗಳನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿವಿ ನಿಲಯದ ವೆಬ್‌ಸೈಟ್ (www.ksoumysuru.ac.in) ನಲ್ಲಿ ಪ್ರಕಟಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಸಭೆಯ ಘಟನೋತ್ತರ ಮಂಜೂರಾತಿ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

**ತೀರ್ಮಾನ :** **2019–20ನೇ ಸಾಲಿನ ಜನವರಿ ಆವರ್ತನ ಪ್ರವೇಶಾತಿ ಪ್ರಾರಂಭಿಸುವ ಸಲುವಾಗಿ ವಿವರಣಾ ಪುಸ್ತಕಗಳನ್ನು 2017ರ ಯು.ಜಿ.ಸಿ ನಿಯಮಾವಳಿಯ ಪ್ರಕಾರ ಸಿದ್ಧಪಡಿಸಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ (www.ksoumysuru.ac.in) ಪ್ರಕಟಿಸಲಾಗಿರುವುದನ್ನು ಸಭೆಯಲ್ಲಿ ಚರ್ಚೆ ನಡೆಸಲಾಯಿತು ಮತ್ತು ಘಟನೋತ್ತರ ಅನುಮೋದನೆ ನೀಡಲಾಯಿತು.**

-----

**ವಿಷಯ ಸಂಖ್ಯೆ: 53.02**

ವಿಷಯ: ಕಾನೂನು ಅಧ್ಯಯನ ವಿಭಾಗದ ಪುನಃಸ್ಥಿತಿಯನ್ನು ಕಾಯ್ದಿರಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾನೂನು ಅಧ್ಯಯನ ವಿಭಾಗವನ್ನು ವರ್ಕ್ ಲೋಡ್ ಇಲ್ಲದ ಕಾರಣ ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ವಿಲೀನಗೊಳಿಸಲಾಗಿತ್ತು. ಮುಂಬರುವ ಶೈಕ್ಷಣಿಕ ವರ್ಷದಿಂದ ಕಾನೂನು ಅಧ್ಯಯನ ವಿಭಾಗಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ದಾಸ್ತಾನಿನಲ್ಲಿ ಲಭ್ಯವಿರುವ ಸಿದ್ಧಪಾಠವನ್ನು ಬಳಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಿಲ್ಲದಂತೆ P.G. Diploma in Intellectual Property Rights and Technology Law, P.G. Diploma in Public Law and Certificate Course in Intellectuall Property Rights, ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಸಂಬಂಧ PPRನ್ನು ಸಿದ್ಧಪಡಿಸಿ BOS ಸಭೆಯಲ್ಲಿ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಕೆ ಮಾಡುವ ಸಂಬಂಧ ಕಾನೂನು ವಿಭಾಗವನ್ನು ಪುನ:ಸ್ಥಿತಿ ಕಾಯ್ದಿರಿಸಲು ವಿಭಾಗದ ಅಧ್ಯಕ್ಷರು ಮನವಿ ಸಲ್ಲಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ)

ಮುಂದುವರೆದು, ಈಗ ಚಾಲ್ತಿಯಲ್ಲಿರುವ Diploma in Business Law ಮತ್ತು ಮೇಲೆ ತಿಳಿಸಲಾಗಿರುವ P.G. Diploma ಮತ್ತು Certificate Courseಗಳನ್ನು ಪರಿಣಾಮಕಾರಿಯಾಗಿ ನಡೆಸಲು BOS in Law and BOE in Law ಅವಶ್ಯಕವಾಗಿರುವ ಕಾರಣ ಕಾನೂನು ಅಧ್ಯಯನ ವಿಭಾಗವನ್ನು ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ವಿಲೀನಗೊಂಡಿರುವುದನ್ನು ಸ್ಥಗಿತಗೊಳಿಸಿ ಕಾನೂನು ಅಧ್ಯಯನ ವಿಭಾಗದ ಪುನ:ಸ್ಥಿತಿಯನ್ನು (Independent Department Status) ಕಾಪಾಡುವ ಸಂಬಂಧ ಶೈಕ್ಷಣಿಕ ಮಂಡಳಿಯ ಸಭೆಯ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

ಕುಲಸಚಿವರು

ಕುಲಪತಿಗಳು

ತೀರ್ಮಾನ : ಕಾನೂನು ಅಧ್ಯಯನ ವಿಭಾಗದಲ್ಲಿ **BOS & BOE** ರಚನೆಗೆ ಅನುಮತಿ ನೀಡಲು ಅನುಮೋದಿಸಲಾಯಿತು. ಜುಲೈ 2020ರ ಶೈಕ್ಷಣಿಕ ಕಾರ್ಯಕ್ರಮದ ಪ್ರವೇಶಾತಿ ಪ್ರಕಟಣೆಗೆ ಮೊದಲು ಅಂದರೆ ಏಪ್ರಿಲ್ 2020 ರಿಂದ ಕಾನೂನು ಅಧ್ಯಯನ ವಿಭಾಗ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅನುಮೋದಿಸಲಾಯಿತು.

------

ವಿಷಯ ಸಂಖ್ಯೆ: 53.03

ವಿಷಯ: ಪಿಹೆಚ್.ಡಿ ಅಭ್ಯರ್ಥಿಗಳ ಆಯ್ಕೆ ಸಂಬಂಧ ಸಂದರ್ಶನಕ್ಕೆ ಆಹ್ವಾನಿತರಾಗುವ ತಜ್ಞರಿಗೆ ಹೆಚ್ಚುವರಿ ಸಂಭಾವನೆ ಪಾವತಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಮತ್ತು ಸಂಶೋಧನ ವಿಭಾಗಗಳು ಪಿಹೆಚ್.ಡಿ. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಯುಜಿಸಿ ನಿಯಮದನ್ವಯ ಅಭ್ಯರ್ಥಿಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡಲು ವಿವಿಯ ವಿವಿಧ ಅಧ್ಯಯನ ವಿಭಾಗಗಳು ಕ್ರಮವಹಿಸಿದ್ದು, ಸದರಿ ಸಂದರ್ಶನಕ್ಕೆ ಆಹ್ವಾನಿತರಾಗುವ ಪರಿಣಿತರಿಗೆ ವಿವಿಯಿಂದ ಸಂಭಾವನೆ ಭತ್ಯೆಗಳನ್ನು ಪಾವತಿಸಬೇಕಾಗಿರುತ್ತದೆ. ಈ ಹಿಂದೆ ಸಂಖ್ಯೆ: ಕರಾಮುವಿ/ಡೀನ್(ಶೈ)/ಡಿಎಸಿ-05/2018-19, ದಿನಾಂಕ: 22.02.2019ರಲ್ಲಿ BOS ಸಭೆಗೆ ಭತ್ಯೆಗಳನ್ನು ನಿಗದಿಪಡಿಸಿ ಕಛೇರಿ ಆದೇಶ ಹೊರಡಿಸಲಾಗಿದೆ (ಪ್ರತಿ ಲಗತ್ತಿಸಿದೆ). ಇದೇ ದರಗಳನ್ನು ವಿಭಾಗೀಯ ಸಂಶೋಧನ ಸಮಿತಿಗೂ ಸಹ ನೀಡಬಹುದಾಗಿದೆ.

ಮುಂದುವರೆದು, ಪ್ರಸ್ತುತ ನೀಡಲಾಗುತ್ತಿರುವ ಭತ್ಯೆಗಳು ಕಡಿಮೆಯಾಗಿದೆಂದು ಕೆಲವು ವಿಭಾಗದ BOS ಅಧ್ಯಕ್ಷರು ಮೌಖಿಕವಾಗಿ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಭಾಹ್ಯ ಸದಸ್ಯರುಗಳಿಗೆ ನೀಡಲಾಗುತ್ತಿರುವ ಸಭಾಭತ್ಯೆಗೆ ಸಂಬಂಧಿಸಿದಂತೆ 10 ವಿದ್ಯಾರ್ಥಿಗೊಳಪಟ್ಟ ಸಂಖ್ಯೆಯಿದ್ದ ಸಂದರ್ಭ ರೂ.600/- ಹಾಗೂ 10 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳಿದ್ದ ಸಂದರ್ಭ ಪ್ರತಿ ವಿದ್ಯಾರ್ಥಿಗೆ ರೂ.60/-ರಂತೆ ಸಭಾಭತ್ಯೆ ನಿಗಧಿ ಪಡಿಸಬಹುದೆಂದು ಅಭಿಪ್ರಾಯ ವ್ಯಕ್ತವಾಗಿರುತ್ತದೆ.(ಈ ಹಿಂದೆ ಪರೀಕ್ಷಾ ಸಂಭಾವನೆ ಆದೇಶದಂತೆ Ph.d Viva-voceಗೆ ಭಾಹ್ಯ ಪರೀಕ್ಷಕರಿಗೆ ಒಂದು ಅಭ್ಯರ್ಥಿಗೆ ರೂ.100/- ನಿಗದಿಯಾಗಿರುತ್ತದೆ). ಸದರಿ ಅಂಶಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಮಂಡಳಿಯ ಸಭೆ, ಹಣಕಾಸು ಸಮಿತಿ ಸಭೆ ಮತ್ತು ವ್ಯವಸ್ಥಾಪನಾ ಮಂಡಳಿಯ ಸಭೆಗಳಲ್ಲಿ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

ತೀರ್ಮಾನ : ಮುಂದಿನ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

------

ವಿಷಯ ಸಂಖ್ಯೆ: 53.04

ವಿಷಯ: **PG Diploma in Human Resource Management & PG Diploma in Financial Management** ಕೋರ್ಸ್‌ಗಳ ನಿರ್ವಹಣೆ ಕುರಿತು.

*****

ಕರಾಮುವಿಯಲ್ಲಿ ನಡೆಸಲಾಗುತ್ತಿರುವ PGDHRM & PGDFM ಕೋರ್ಸ್‌ಗಳನ್ನು ಸುಮಾರು 10-15 ವರ್ಷಗಳಿಂದಲೂ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ನಿರ್ವಹಣೆ ಮಾಡಲಾಗುತ್ತಿದೆ. ಮುಖ್ಯಸ್ಥರು ನಿರ್ವಹಣಶಾಸ್ತ್ರ ವಿಭಾಗ ಇವರು ಮನವಿ ಪತ್ರವನ್ನು ಸಲ್ಲಿಸಿ ಸದರಿ ಕೋರ್ಸ್‌ಗಳನ್ನು ನಿರ್ವಹಣಶಾಸ್ತ್ರ ವಿಭಾಗದಿಂದ ನಿರ್ವಹಿಸುವಂತೆ ಕೋರಿರುತ್ತಾರೆ. ಮಾನ್ಯ ಕುಲಪತಿಗಳು ದಿನಾಂಕ: 07-11-2019ರಂದು ಸದರಿ ಕೋರ್ಸ್‌ಗಳನ್ನು ವಾಣಿಜ್ಯಶಾಸ್ತ್ರ ವಿಭಾಗದಿಂದ ನಿರ್ವಹಣೆ ಮಾಡುವಂತೆ ಅನುಮೋದನೆ ನೀಡಿರುವುದರಿಂದ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನ ಹಾಗೂ ಅನುಮೋದನೆ ಕೋರಿದೆ.

ಕುಲಸಚಿವರು

ಕುಲಪತಿಗಳು

ತೀರ್ಮಾನ : PGDHRM ಕಾರ್ಯಕ್ರಮವನ್ನು ನಿರ್ವಹಣಾಶಾಸ್ತ್ರ ವಿಭಾಗದವರು ಮತ್ತು PGDFM ಕೋರ್ಸ್‌ನ್ನು ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ನಿರ್ವಹಿಸುವಂತೆ ಸಭೆಯು ತೀರ್ಮಾನಿಸಿತು.

-----

**ವಿಷಯ ಸಂಖ್ಯೆ: 53.05**

ವಿಷಯ: ಡಾ. ಶೈಲೇಶ್ ರಾಜ್ ಅರಸ್. ಜೆ.ಬಿ, ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು-06 ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸುವ ಬಗೆಗೆ.

******

ಡಾ. ಶೈಲೇಶ್ ರಾಜ್ ಅರಸ್.ಜೆ.ಬಿ, ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು-06 ಇವರು ವಿವಿಯಲ್ಲಿ ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸಲು ದಿನಾಂಕ:12.12.2018 ರಂದು ಮನವಿಯನ್ನು ಸಲ್ಲಿಸಿರುತ್ತಾರೆ. **ಅನುಬಂಧ (ಅ)** ನಲ್ಲಿ ಪ್ರತಿ ಲಗತ್ತಿಸಿದೆ.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನ ವಿಭಾಗದ ಅಧ್ಯಯನ ಮಂಡಳಿಯ ಅಧ್ಯಕ್ಷರು, ಸದರಿ ಅಧ್ಯಯನ ಮಂಡಳಿ ಸದಸ್ಯರುಗಳಿಗೆ ದಿನಾಂಕ: 18.05.2019ರಂದು e-mail ಮುಖಾಂತರ ಡಾ. ಶೈಲೇಶ್ ರಾಜ್ ಅರಸ್. ಜೆ.ಬಿ, ಇವರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸಲು, ಶಿಫಾರಸ್ಸನ್ನು ನೀಡಲು ಕೋರಿದ್ದು, ಅಧ್ಯಯನ ಮಂಡಳಿ ಸದಸ್ಯರು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಪರಿಗಣಿಸಬಹುದೆಂದು ಶಿಫಾರಸ್ಸನ್ನು e-mail ಮುಖಾಂತರ ನೀಡಿರುತ್ತಾರೆ. **ಅನುಬಂಧ (ಆ)**ನಲ್ಲಿ ಪ್ರತಿ ಲಗತ್ತಿಸಿದೆ.

ಅದರಂತೆ ದಿನಾಂಕ: 21.05.2019ರಂದು ಅಧ್ಯಯನ ಮಂಡಳಿ ಅಧ್ಯಕ್ಷರು ಸದರಿ ಪ್ರಾಧ್ಯಾಪಕರನ್ನು ಪಿಹೆಚ್.ಡಿ ಮಾರ್ಗದರ್ಶನಕ್ಕೆ ಪರಿಶೀಲಿಸಲು ಡೀನ್ (ಶೈಕ್ಷಣಿಕ) ವಿಭಾಗಕ್ಕೆ ಪತ್ರ ನೀಡಿರುತ್ತಾರೆ **ಅನುಬಂಧ (ಇ)** ನಲ್ಲಿ ಪ್ರತಿ ಲಗತ್ತಿಸಿದೆ.

ದಿನಾಂಕ: 03.05.2019 ರಂದು ನಡೆದ ಶೈಕ್ಷಣಿಕ ಮಂಡಳಿಯ **ವಿಷಯ ಸಂಖ್ಯೆ 51.04** ರಲ್ಲಿ 14 ಮಂದಿ ಅಧ್ಯಾಪಕರನ್ನು ಪಿಹೆಚ್.ಡಿ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡುವ ಸಂಬಂಧ ಚರ್ಚಿಸಿ ನಿರ್ಣಯಿಸಿದ್ದು, ಆ ಸಂದರ್ಭದಲ್ಲಿ ಡಾ. ಶೈಲೇಶ್ ರಾಜ್ ಅರಸ್.ಜೆ.ಬಿ, ರವರಿಗೆ ಸಂಬಂಧಿಸಿದಂತೆ BOS ನಡೆದಿಲ್ಲವೆಂಬ ಕಾರಣದಿಂದ ಸದರಿಯವರಿಗೆ ಪಿಹೆಚ್.ಡಿ ಮಾರ್ಗದರ್ಶಕರಾಗಲು BOM ಸಭೆಯ ಮುಂದೆ ಮಂಡಿಸಲು ಶೈಕ್ಷಣಿಕ ಮಂಡಳಿ ಸಭೆಯು ಶಿಫಾರಸ್ಸು ಮಾಡಿರುವುದಿಲ್ಲ. **ಅನುಬಂಧ (ಈ)** ನಲ್ಲಿ ಪ್ರತಿ ಲಗತ್ತಿಸಿದೆ.

156ನೇ ವ್ಯವಸ್ಥಾಪನ ಮಂಡಳಿ ಸಭೆಯು ಶೈಕ್ಷಣಿಕ ಮಂಡಳಿ ಸಭಯ 51.04 ವಿಷಯವನ್ನು ಹೊರತುಪಡಿಸಿ ನಡವಳಿಯಲ್ಲಿನ ಉಳಿದ ಎಲ್ಲಾ ವಿಷಯಗಳನ್ನು ಯಥಾವತ್ತಾಗಿ ಅನುಮೋದಿಸಿದೆ ಎಂದು ತೀರ್ಮಾನವಾಗಿರುವುದು.

ತೀರ್ಮಾನ : ಡಾ. ಶೈಲೇಶ್ ರಾಜ್ ಅರಸ್.ಜೆ.ಬಿ, ಸಹಾಯಕ ಪ್ರಾಧ್ಯಾಪಕರು, ಅವರ ಪಿಹೆಚ್.ಡಿ ಮಾರ್ಗದರ್ಶಕರ ಅರ್ಜಿ ಪರಿಗಣಿಸಿ, ಈಗಾಗಲೇ ಶೈಕ್ಷಣಿಕ ಮಂಡಳಿಯ ವಿಷಯ ಸಂಖ್ಯೆ 51.04 ರಲ್ಲಿ 14 ಮಂದಿ ಅಧ್ಯಾಪಕರನ್ನು ಕುರಿತಂತೆ ಚರ್ಚಿಸಿ ಶಿಫಾರಸ್ಸು ಮಾಡಿದಂತೆ ಇವರ ಹೆಸರನ್ನು ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು.

-----

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 53.06**

ವಿಷಯ: 2020-21ನೇ ಶೈಕ್ಷಣಿಕ ಸಾಲಿನ ಜುಲೈ ಆವರ್ತನದ ಪ್ರವೇಶಾತಿಗೆ ನೂತನ ಶಿಕ್ಷಣ ಕ್ರಮಗಳನ್ನು ಪ್ರಾರಂಭಿಸಲು ಪ್ರಸ್ತಾವನೆಗಳನ್ನು ಅನುಮೋದಿಸುವ ಬಗೆಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಈ ಕೆಳಕಂಡ ಅಧ್ಯಯನ ಮತ್ತು ಸಂಶೋಧನ ವಿಭಾಗಗಳು ತಮ್ಮ ವಿಭಾಗದ ವ್ಯಾಪ್ತಿಯಲ್ಲಿ 2020-21ನೇ ಶೈಕ್ಷಣಿಕ ಸಾಲಿನ ಜುಲೈ ಆವರ್ತನದ ಪ್ರವೇಶಾತಿಗೆ ನೂತನ ಶಿಕ್ಷಣ ಕ್ರಮಗಳನ್ನು ಹೊಸದಾಗಿ ಪ್ರಾರಂಭಿಸಲು PPR ಗಳನ್ನು ಸಿದ್ಧಪಡಿಸಿ ಅನುಮೋದನೆಗೆ ಸಲ್ಲಿಕೆಯಾಗಿರುತ್ತದೆ.

| ಕ್ರ. ಸಂ | PPR ಸಲ್ಲಿಸಿರುವ ವಿಭಾಗಗಳು | ಪ್ರಾರಂಭಿಸಲು ಉದ್ದೇಶಿಸಿರುವ ಶಿಕ್ಷಣಕ್ರಮಗಳು |
|---|---|---|
| 01 | Department of Studies in Law | LLM |
| 02 | Department of Studies and Research in Education | M A in Education |
| 03 | Department of Studies and Research in Management | Bachelor of Business Administration (BBA) |
| 04 | Departments of Studies in Science | B.Sc - Bachelor of Science |
| 05 | Department of Studies in Computer Science | Bachelor of Computer Applications (BCA) |
| 06 | Department of Studies in Information Science | Diploma in Information Technology( DIT)<br>Post Diploma in Information Technology(PGDIT)<br>Bachelor of Science in Information Technology (BSc IT)<br>Master of Science in Information Technology (MSc IT) |
| 07 | Department of Studies and Research in Microbiology | M.Sc. in Botany |
| 08 | Department of Studies and Research in Commerce | Post Graduate Diploma in Banking and Insurance (PGDBI) |
| 09 | Department of Studies and Research in MSc.BioTechnology | MSc. In Zoology |
| 10 | Department of Studies and Research in Telugu | MA in Telugu |
| 11 | Department of Studies and Research in MBA | Executive-MBA |
| 12 | Department of Studies and Research in Food Science and Nutrition | M.Sc in Food Science and Nutrition |

ಮೇಲ್ಕಂಡ ಶಿಕ್ಷಣ ಕ್ರಮಗಳನ್ನು 2020-21ನೇ ಸಾಲಿನ ಜುಲೈ ಆವರ್ತನದಿಂದ ಕರಾಮುವಿಯಲ್ಲಿ ಆರಂಭಿಸಲು ಅನುಮೋದನೆ ಕೋರಿದೆ.

ಕುಲಸಚಿವರು

ಕುಲಪತಿಗಳು

UGC (ODL) Regulations-2017ರ ಪ್ರಕಾರ ಉನ್ನತ ಶಿಕ್ಷಣ ಸಂಸ್ಥೆಗಳು ದೂರ ಶಿಕ್ಷಣ ಪದ್ಧತಿಯಡಿ 2020–21ರ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸುವ ಶಿಕ್ಷಣಕ್ರಮಗಳಿಗೆ ಮಾನ್ಯತೆ ಪಡೆಯಲು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ದಿನಾಂಕ: 31.12.2019ರವರೆಗೆ ಅವಕಾಶವನ್ನು ನೀಡಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿಭಾಗಗಳಿಂದ ಸಲ್ಲಿಕೆಯಾಗಿರುವ PPRಗಳನ್ನು CIQA ದಿಂದ ಅನುಮೋದನೆ ಪಡೆದು ಶೈಕ್ಷಣಿಕ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಚರ್ಚೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

ಈ ಮೇಲ್ಕಂಡ ಎಲ್ಲಾ ಶಿಕ್ಷಣ ಕ್ರಮಗಳಿಗೆ UGC (ODL) Regulations-2017ರ ಪ್ರಕಾರ ಸಿದ್ಧಪಾಠಗಳನ್ನು ವಿಭಾಗಗಳು ಸಲ್ಲಿಸಿದ್ದು, ಅನುಮೋದನೆಗೆ ಮಂಡಿಸಿದೆ

**ತೀರ್ಮಾನ :**

1) **ಕ್ರಮಸಂಖ್ಯೆ 1 ರಿಂದ 12ರವರೆಗಿನ ಕೋರ್ಸುಗಳನ್ನು ಕರಾಮುವಿಯಲ್ಲಿ ಪ್ರಾರಂಭಿಸಲು ಸಭೆಯು ಅನುಮೋದಿಸಿತು.**
2) **ಕ್ರಮಸಂಖ್ಯೆ 1 ರಿಂದ 12ರವರೆಗಿನ ಕೋರ್ಸುಗಳ PPRಗಳನ್ನು ಅನುಮೋದಿಸಲಾಯಿತು.**
3) **ಕ್ರಮಸಂಖ್ಯೆ 1 ರಿಂದ 12ರವರೆಗಿನ ಕೋರ್ಸುಗಳ SLMಗಳನ್ನು ಅನುಮೋದಿಸಲಾಯಿತು.**

**BOM ಅನುಮೋದನೆ ಕಾಯ್ದಿರಿಸಿ UGCಗೆ ಸಲ್ಲಿಸಲು ಸಭೆಯು ಅನುಮೋದಿಸಿತು.**

-----

**ವಿಷಯ ಸಂಖ್ಯೆ : 53.07**

**ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು (Skill Development Programmes)ಅನ್ನು ಅಳವಡಿಸಿಕೊಳ್ಳುವ ಬಗೆಗೆ.**

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು (Skill Development Programmes) ಅಳವಡಿಸಿಕೊಳ್ಳುವ ಸಂಬಂಧ ಅಧ್ಯಾದೇಶದ ಕರಡನ್ನು (Ordinance) ಸಿದ್ಧಪಡಿಸಲಾಗಿದ್ದು, (ಪ್ರತಿ ಲಗತ್ತಿಸಿದೆ.) ಸದರಿ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ ಚರ್ಚೆ ಹಾಗೂ ಅನುಮೋದನೆ ಕೋರಿ ಮಂಡಿಸಿದೆ.

**ತೀರ್ಮಾನ :** NSDCಯ **ಪಟ್ಟಿಯಲ್ಲಿರುವ 2221 ಕೋರ್ಸ್‌ಗಳನ್ನು ಆರಂಭಿಸಲು ಸಭೆಯಲ್ಲಿ ಅನುಮೋದಿಸಿತು. ಈ ಸಂಬಂಧ ರಚಿಸಿರುವ ಅಧ್ಯಾದೇಶಗಳನ್ನು ಅನುಮೋದಿಸಲಾಯಿತು.**

-----

**ವಿಷಯ ಸಂಖ್ಯೆ: 53.08**

**ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ UGC Act of 1956 ರನ್ವಯ 12(b) ಮಾನ್ಯತೆಯನ್ನು ಪಡೆಯುವ ಸಂಬಂಧ ಯುಜಿಸಿಗೆ ಪ್ರಸ್ತಾವವನ್ನು ಸಲ್ಲಿಸುವ ಬಗೆಗೆ.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ UGC Act of 1956 ರನ್ವಯ 12(b) ಮಾನ್ಯತೆಯನ್ನು ಪಡೆಯುವ ಸಂಬಂಧ ವಿವಿ ನಿಲಯದ ಇತರೆ ವಿಭಾಗಗಳಿಂದ ನೀಡಿರುವ ಮಾಹಿತಿಗಳನ್ನು ಕ್ರೋಢೀಕರಿಸಿ ಯುಜಿಸಿಯು ನಿಗದಿಪಡಿಸಿದ ನಮೂನೆಯಲ್ಲಿ ಮಾಹಿತಿಗಳನ್ನು ಸಿದ್ಧಪಡಿಸಲಾಗಿದ್ದು, (ಪ್ರತಿ ಲಗತ್ತಿಸಿದೆ.) ಸದರಿ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ ಚರ್ಚೆ ಹಾಗೂ ಅನುಮೋದನೆ ಕೋರಿ ಮಂಡಿಸಿದೆ.

ಕುಲಸಚಿವರು ಕುಲಪತಿಗಳು

ತೀರ್ಮಾನ : UGC 12(b) ಯ ಮಾನ್ಯತೆಗೆ ಸಿದ್ಧಪಡಿಸಲಾಗಿರುವ ಪ್ರಸ್ತಾವನೆಯನ್ನು UGCಗೆ ಸಲ್ಲಿಸಲು ಒಪ್ಪಿಗೆ ನೀಡಲಾಯಿತು.

-----

**ವಿಷಯ ಸಂಖ್ಯೆ: 53.09**

ವಿಷಯ: ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2019 (ಎರಡನೇ ತಿದ್ದಪಡಿ)ರ ಕರಡನ್ನು ಅನುಮೋದಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಕಾರ್ಯಕ್ರಮದ ಆಧ್ಯಾದೇಶಗಳನ್ನು 2012ರಲ್ಲಿ ರಚಿಸಿದ್ದು, ಗೌರವಾನ್ವಿತ ಕುಲಾಧಿಪತಿಗಳಿಂದ ಅಂಕಿತವಾಗಿರುತ್ತದೆ. (ಅನುಬಂಧ 'ಅ' ನಲ್ಲಿ ಲಗತ್ತಿಸಿದೆ).

ನಂತರ ಯುಜಿಸಿ ನಿಯಮಾವಳಿ 2016 ರ ಅನ್ವಯ ಪಿಹೆಚ್.ಡಿ ಆಧ್ಯಾದೇಶ 2012ನ್ನು ಪರಿಷ್ಕರಿಸಿ ಪಿಹೆಚ್.ಡಿ ತಿದ್ದುಪಡಿ ಆಧ್ಯಾದೇಶ 2018ನ್ನು ಸಂಖ್ಯೆ: ಕರಾಮುವಿ/ಡೀನ್(ಶೈ)01/2018–19, ದಿನಾಂಕ:17.11.2018 ರಂದು ಅಧಿಸೂಚನೆ ಹೊರಡಿಸಿರುತ್ತದೆ. (ಅನುಬಂಧ 'ಆ' ನಲ್ಲಿ ಲಗತ್ತಿಸಿದೆ).

ಪಿಹೆಚ್.ಡಿ ಆಧ್ಯಾದೇಶ 2018ರಲ್ಲಿ ಯುಜಿಸಿ ಪಿಹೆಚ್.ಡಿ ನಿಯಮಾವಳಿ 2016ರ ಪ್ರಕಾರ **Department Research Council** ಬಗೆಗೆ ಮತ್ತು ಪಿಹೆಚ್.ಡಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಆಡಳಿತಾತ್ಮಕ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಕೆಲವು ಅಂಶಗಳು ಬಿಟ್ಟು ಹೋಗಿದ್ದರಿಂದ ಸೇರ್ಪಡೆ ಮಾಡಲು ಪ್ರಸ್ತುತ **"ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2019"** (ಎರಡನೇ ತಿದ್ದುಪಡಿ)ರ ಕರಡನ್ನು ಸಿದ್ಧಪಡಿಸಲಾಗಿರುತ್ತದೆ. (ಅನುಬಂಧ 'ಇ' ನಲ್ಲಿ ಲಗತ್ತಿಸಿದೆ).

ವಿಶ್ವವಿದ್ಯಾನಿಲಯವು ಈ ಹಿಂದಿನ ಪಿಹೆಚ್.ಡಿ ಆಧ್ಯಾದೇಶ 2018ರ ಪ್ರಕಾರ ಪಿಹೆಚ್.ಡಿ ಕಾರ್ಯಕ್ರಮದ ಪ್ರವೇಶಾತಿಗೆ ಸಂಬಂಧಿಸಿದಂತೆ ಅಧಿಸೂಚನೆಯನ್ನು ಸಂಖ್ಯೆ:ಕರಾಮುವಿ/ಡೀನ್(ಶೈ)/ಡಿಎಸಿ–1/ಪಿಹೆಚ್.ಡಿ./2018–19, ದಿನಾಂಕ: 08.03.2019ರಂದು ಪ್ರಕಟಿಸಿತ್ತು. ಪ್ರಕಟಣೆಗೆ ಅನುಗುಣವಾಗಿ ಅರ್ಜಿ ಸಲ್ಲಿಸಿದ್ದ ವಿದ್ಯಾರ್ಥಿಗಳಿಗೆ ಸಾಮಾನ್ಯ ಪರೀಕ್ಷೆ ನಡೆದಿರುತ್ತದೆ. ಪ್ರಸ್ತುತ, ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಉದ್ದೇಶದಿಂದ ಹೊಸದಾಗಿ **ಯುಜಿಸಿ ಪಿಹೆಚ್.ಡಿ ನಿಯಮಾವಳಿ 2016**ರ ಪ್ರಕಾರ ಸಿದ್ಧಪಡಿಸಲಾಗಿರುವ **"ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2019 (ಎರಡನೇ ತಿದ್ದುಪಡಿ)"** ರನ್ವಯ **Department Research Council**ಅನ್ನು ನೇಮಕ ಮಾಡಿಕೊಂಡು ವಿದ್ಯಾರ್ಥಿ ಆಯ್ಕೆ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ ಎಂಬ ಅಂಶವನ್ನು ಗಮನಕ್ಕೆ ತರಲಾಗಿದೆ.

ಮೇಲಿನ ವಿವರಣೆಯನ್ನು ಗಮನಕ್ಕೆ ತರುತ್ತ ವಿವಿಯು ಹೊಸದಾಗಿ ಪರಿಷ್ಕರಿಸಿ ಸಿದ್ಧಪಡಿಸಲಾಗಿರುವ ಕರಾಮುವಿ ಪಿಹೆಚ್.ಡಿ ಆಧ್ಯಾದೇಶ 2019 (ಎರಡನೇ ತಿದ್ದುಪಡಿ)ನ್ನು ಅಳವಡಿಸಿಕೊಳ್ಳಲು ಹಾಗೂ ಶೈಕ್ಷಣಿಕ ಮಂಡಳಿ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

ತೀರ್ಮಾನ : ಪಿಹೆಚ್.ಡಿ ಆಧ್ಯಾದೇಶ – 2019 (ಎರಡನೇ ತಿದ್ದುಪಡಿ) ಪರಿಷ್ಕೃತ ಕರಡನ್ನು ಸಭೆಯು ಅನುಮೋದಿಲಾಯಿತು.

ಪಿಹೆಚ್.ಡಿ ಪದವಿಯ ಅಧ್ಯಾದೇಶದ ಬಗ್ಗೆ ಚರ್ಚೆ ಮುಂದುವರಿದಂತೆ ಡೀನ್(ಶೈಕ್ಷಣಿಕ) ರವರು ಈ ಹಿಂದೆ 26ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನದ ಬಗ್ಗೆ ಸಭೆಗೆ ತಿಳಿಸಲಾಗಿ 26ನೇ ಶೈಕ್ಷಣಿಕ ಮಂಡಳಿ ಸಭೆ ದಿನಾಂಕ: 25–11–2013, ವಿಷಯಸಂಖ್ಯೆ: 2ರ ತೀರ್ಮಾನದಲ್ಲಿ ವಿವರಿಸಲಾಗಿರುವ ವಿಷಯಗಳನ್ನು ಹಿಂಪಡೆದು ಶೈಕ್ಷಣಿಕ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಅಧ್ಯಾಪಕರು ಅವರ ಸೇವಾ ನಿವೃತ್ತಿಯವರೆವಿಗೂ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಲಭ್ಯವಿರಬೇಕು ಮತ್ತು ಸಂಶೋಧನಾ ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಲು ಪರಿಗಣಿಸಬೇಕು ಎಂದು ತೀರ್ಮಾನಿಸಲಾಯಿತು.

-----

ಕುಲಸಚಿವರು

ಕುಲಪತಿಗಳು

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

**ವಿಷಯ ಸಂಖ್ಯೆ: 53.10**

**(1) ವಿಷಯ: 2019–20ನೇ ಸಾಲಿನ ಜನವರಿ ಆವೃತ್ತಿಯ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಸಂಬಂಧಿಸಿದಂತೆ ಜಾಹಿರಾತು ಪ್ರಚುರಪಡಿಸಿರುವ ಕುರಿತು.**

*****

2019–20ನೇ ಸಾಲಿನ ಜನವರಿ ಆವೃತ್ತಿಯ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಯನ್ನು ನಡೆಸುವ ಸಂಬಂಧ ಈ ಕೆಳಕಂಡ ದಿನಾಂಕಗಳಂದು ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಜಾಹಿರಾತು ಪ್ರಚುರಪಡಿಸಿರುವುದನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

| ಕ್ರ.ಸಂ. | ದಿನಾಂಕ | ಪತ್ರಿಕೆ | ಮಾಧ್ಯಮ | ಅಳತೆ |
|---|---|---|---|---|
| 1. | 15–12–2019 | 1. ವಿಜಯವಾಣಿ, | ಕನ್ನಡ | 29"X20" |
| | | 2. ಪ್ರಜಾವಾಣಿ, | ಕನ್ನಡ | 29"X20" |
| | | 3. ಮೈಸೂರು ಮಿತ್ರ | ಕನ್ನಡ | 29"X20" |
| | | 4. ಕನ್ನಡ ಪ್ರಭ | ಕನ್ನಡ | 29"X20" |
| | | 5. ಡೆಕ್ಕನ್ ಹೆರಾಲ್ಡ್ | ಇಂಗ್ಲಿಷ್ | 27"X20" |
| 2. | 19–12–2019 | 1. ಉದಯವಾಣಿ | ಕನ್ನಡ | 29"X20" |
| | | 2. ಸಂಯುಕ್ತ ಕರ್ನಾಟಕ | ಕನ್ನಡ | 29"X20" |
| | | 3. ಹೊಸ ದಿಗಂತ | ಕನ್ನಡ | 29"X20" |
| | | 4. ಆಂದೋಲನ | ಕನ್ನಡ | 29"X20" |
| | | 5. ಟೈಮ್ಸ್ ಆಫ್ ಇಂಡಿಯಾ | ಇಂಗ್ಲಿಷ್ | 27"X20" |
| 3. | 22–12–2019 | 1. ವಿಜಯ ಕರ್ನಾಟಕ | ಕನ್ನಡ | 29"X20" |
| | | 2. ವಿಶ್ವವಾಣಿ | ಕನ್ನಡ | 29"X20" |
| | | 3. ದ ಹಿಂದೂ | ಇಂಗ್ಲಿಷ್ | 27"X20" |
| | | 4. ಸ್ಟಾರ್ ಆಫ್ ಮೈಸೂರ್ | ಇಂಗ್ಲಿಷ್ | 27"X20" |
| | | 5. ಇಂಡಿಯನ್ ಎಕ್ಸ್‌ಪ್ರೆಸ್ | ಇಂಗ್ಲಿಷ್ | 27"X20" |
| | | 6. ಡೆಕ್ಕನ್ ಕ್ರಾನಿಕಲ್ | ಇಂಗ್ಲಿಷ್ | 27"X20" |
| | | 7. ಪ್ರಜಾನುಡಿ | ಕನ್ನಡ | 29"X20" |

ತೀರ್ಮಾನ : 2019–20ನೇ ಸಾಲಿನ ಜನವರಿ ಆವೃತ್ತಿಯ ಶೈಕ್ಷಣಿಕ ಕೋರ್ಸುಗಳ ಬಗ್ಗೆ ಜಾಹೀರಾತು ನೀಡಲಾಗಿದ್ದು, ಸದರಿ ಜಾಹೀರಾತನ್ನು ಸಭೆಯು ಘಟನೋತ್ತರ ಮಂಜೂರಾತಿಗೆ ಅನುಮೋದನೆ ನೀಡಿತು.

-----

ಕುಲಸಚಿವರು

ಕುಲಪತಿಗಳು

(2) ವಿಷಯ: 2019–20 ನೇ ಸಾಲಿನ ಜನವರಿ ಆವೃತ್ತಿಯ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿ ಶುಲ್ಕವನ್ನು ನಿಗಧಿಪಡಿಸಿರುವ ಕುರಿತು.

******

2019–20ನೇ ಸಾಲಿನ ಜನವರಿ ಆವೃತ್ತಿಯ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಯನ್ನು ನಡೆಸುವ ಸಂಬಂಧ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ನಿಗಧಿಪಡಿಸಲಾಗಿರುವ ಶುಲ್ಕದಲ್ಲಿ P.G. Diploma-Information Science ವಿಷಯಕ್ಕೆ ಶುಲ್ಕ ರೂ. 6,300/– ರೂ. ಆಗುವ ಬದಲು ಕೈ ತಪ್ಪಿನಿಂದಾಗಿ ಶುಲ್ಕ ರೂ.12,600/– ಎಂದು ನಿಗಧಿಪಡಿಸಲಾಗಿರುತ್ತದೆ. ಇದನ್ನು ಪರಿಷ್ಕರಿಸಿ ರೂ.6300/– ನಿಗಧಿಪಡಿಸಿರುವ ಸಂಬಂಧವಾಗಿ ಹಾಗೂ ಪ್ರಥಮ ವರ್ಷದ ಬಿ.ಇಡಿ. ವಿಷಯಕ್ಕೆ ಶುಲ್ಕ ರೂ.22,500/– ಆಗುವ ಬದಲು ರೂ. 17,500/– ನಿಗಧಿಪಡಿಸಲಾಗಿರುತ್ತದೆ. ಹಾಗೂ ದ್ವಿತೀಯ ವರ್ಷದ ಬಿ.ಇಡಿ. ವಿಷಯಕ್ಕೆ ಶುಲ್ಕ ರೂ. 20,000/– ಆಗುವ ಬದಲು ರೂ. 17,000/– ನಿಗಧಿಪಡಿಸಲಾಗಿರುತ್ತದೆ. ಇದನ್ನು ಪರಿಷ್ಕರಿಸಿ ಪ್ರಥಮ ವರ್ಷದ ಬಿ.ಇಡಿ. ವಿಷಯಕ್ಕೆ ಶುಲ್ಕ ರೂ. 22,500/– ಮತ್ತು ದ್ವಿತೀಯ ವರ್ಷದ ಬಿ.ಇಡಿ. ವಿಷಯಕ್ಕೆ ಶುಲ್ಕ ರೂ. 20,000/– ನಿಗಧಿಪಡಿಸುವ ಸಂಬಂಧ ಸಭೆಗೆ ಮಂಡಿಸಲಾಗಿದೆ.

ಬೇರೆ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಶುಲ್ಕವನ್ನು ನಿಗಧಿಪಡಿಸಿ ಕಛೇರಿ ಆದೇಶ ಹೊರಡಿಸಲಾಗಿರುವುದನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ವಿಷಯ ಮಂಡಿಸಿದೆ.

**ತೀರ್ಮಾನ:**

(a) **B.Ed ಕೋರ್ಸ್‌ನ ಶುಲ್ಕವನ್ನು ಹೆಚ್ಚಿಸುವ ಸಲುವಾಗಿ ಸಿದ್ದಪಡಿಸಲಾಗಿರುವ ಅಧ್ಯಾದೇಶವನ್ನು ಅನುಮೋದಿಸಲಾಯಿತು.**

(b) **2019–20ನೇ ಸಾಲಿನ ಜನವರಿ ಆವೃತ್ತಿಯ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಯನ್ನು ನಡೆಸುವ ಸಂಬಂಧ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸರ್ಕಾರಕ್ಕೆ ಸಲ್ಲಿಸಿರುವ ಅಧ್ಯಾದೇಶಗಳಲ್ಲಿ ನಿಗಧಿಪಡಿಸಲಾಗಿರುವ ಶುಲ್ಕದಲ್ಲಿ P.G. Diploma-Information Science ವಿಷಯಕ್ಕೆ ಶುಲ್ಕ ರೂ.6,300/– ಆಗುವ ಬದಲು ಕಣ್ತಪ್ಪಿನಿಂದ ಶುಲ್ಕ ರೂ.12,600/– ಎಂದು ನಿಗಧಿಪಡಿಸಲಾಗಿರುತ್ತದೆ. ಇದನ್ನು ಸಭೆಯಲ್ಲಿ ಚರ್ಚಿಸಿ, ಚರ್ಚೆಯೊಂದಿಗೆ ರೂ.6,300/– ಗಳಿಗೆ ಪ್ರವೇಶಾತಿ ಶುಲ್ಕ ನಿಗದಿಗೊಳಿಸಲು ಅನುಮೋದಿಸಲಾಯಿತು.**

(c) **2020ನೇ ಜನವರಿ Cycleನಲ್ಲಿ B.Ed ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡುವ ಸಂಬಂಧ B.Ed ಪ್ರವೇಶಾತಿ ಸಮಿತಿ ರಚಿಸಿ ಅದರಲ್ಲಿ ಪ್ರವೇಶಾತಿ ವಿಭಾಗದ ನಿರ್ದೇಶಕರು, ಅಧ್ಯಕ್ಷರಾಗಿ B.Ed ವಿಭಾಗದ ಮುಖ್ಯಸ್ಥರು ಸಂಚಾಲಕರಾಗಿ, B.Ed ವಿಭಾಗದ ಅಧ್ಯಾಪಕರನ್ನು ಸದಸ್ಯರುಗಳನ್ನಾಗಿ ಸಮಿತಿ ರಚಿಸಿ, ಪ್ರವೇಶಾತಿ ಪ್ರಕ್ರಿಯೆ ಕೈಗೊಳ್ಳಲು ಪ್ರವೇಶಾತಿ ವಿಭಾಗ ಕಾರ್ಯನಿರ್ವಾಹಕರು ಹಾಗೂ ಇತರೇ ಸಿಬ್ಬಂದಿಗಳ ಸಹಾಯ ಪಡೆದುಕೊಳ್ಳಲು ಸಭೆಯು ಅನುಮೋದಿಸಿತು.**

-----

ಕುಲಸಚಿವರು

ಕುಲಪತಿಗಳು

(3) ವಿಷಯ: ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗವನ್ನು ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗ ಎಂಬುದಾಗಿ ಶೈಕ್ಷಣಿಕ ಕಾರ್ಯಕ್ರಮಗಳ ಶಿರೋನಾಮೆಗಳನ್ನು ಬದಲಾಯಿಸುವ ಬಗೆಗೆ.

*****

2020-21ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ ಮಾಹಿತಿ ವಿಜ್ಞಾನ ವಿಭಾಗದ ವತಿಯಿಂದ ನಡೆಸಲಾಗುವ UG, PG, Diploma ಹಾಗೂ Certificate ಕಾರ್ಯಕ್ರಮಗಳನ್ನು ಬದಲಾವಣೆ ಮಾಡಿಕೊಳ್ಳುವ ಬಗ್ಗೆ ವಿಭಾಗದ ಅಧ್ಯಯನ ಮಂಡಳಿಯ ಒಪ್ಪಿಗೆ ಪಡೆದು ಈ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲು ಹಾಗೂ ಯುಜಿಸಿಗೆ ಸಲ್ಲಿಸಲು ಸಿದ್ಧಪಡಿಸಿರುವ PPR ನಲ್ಲೂ ಸಹ Information Science ಎಂಬುದರ ಬದಲಾಗಿ Information Technology ಎಂದು ಬದಲಾವಣೆ ಮಾಡುವ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲು ವಿಷಯವನ್ನು ಮಂಡಿಸಿದೆ.

ಬದಲಾವಣೆಗೆ ಪ್ರಸ್ತಾಪಿಸಲಾಗಿರುವ ಕಾರ್ಯಕ್ರಮಗಳ ಶಿರೋನಾಮೆ ಈ ಕೆಳಕಂಡಂತಿದೆ.

| ಕ್ರಸಂ | ಪ್ರಸ್ತುತ ಇರುವ ಶಿರೋನಾಮೆ | ಪ್ರಸ್ತಾಪಿತ ಶಿರೋನಾಮೆ |
|---|---|---|
| 1. | B.Sc. Information Science | B.Sc. Information Technology |
| 2. | M.Sc. Information Science | M.Sc. Information Technology |
| 3. | Diploma In Information Science | Diploma In Information Technology |
| 4. | Post Graduate Diploma in Information Science | Post Graduate Diploma in Information Technology |
| 5. | Information Communication Science (ICS) | Information Communication Technology (ICT) |

ತೀರ್ಮಾನ: ಮಾಹಿತಿ ವಿಜ್ಞಾನ ವಿಭಾಗ ಶಿರೋನಾಮೆಯನ್ನು ಬದಲಿಸಿ ಮಾಹಿತಿ ತಂತ್ರಜ್ಞಾನ ಅಧ್ಯಯನ ವಿಭಾಗ ಎಂದು ಬದಲಾಯಿಸಿ ಕಾರ್ಯನಿರ್ವಹಿಸಲು ಸಭೆಯ ಅನುಮೋದಿಸಲಾಯಿತು.

ಮುಂದುವರೆದು ಹಾಲಿ ಇರುವ **B.Sc. Information Science, M.Sc. Information Science, Diploma In Information Science, Information Communication Science (ICS)** ಕಾರ್ಯಕ್ರಮಗಳನ್ನು ಹಾಗೆಯೇ ಉಳಿಸಿಕೊಂಡು ಹೊಸದಾಗಿ **B.Sc.IT, M.Sc.IT, Diploma IT, PG-Diploma IT** ಮತ್ತು **Information Communication Technology** ಗಳನ್ನು ಹೊಸ ಶೈಕ್ಷಣಿಕ ಕಾರ್ಯಕ್ರಮಗಳನ್ನಾಗಿ ಪ್ರಾರಂಭಿಸಲು **PPR**ಗಳನ್ನು ಸಲ್ಲಿಸಲು ಸಭೆಯು ಒಪ್ಪಿಗೆ ನೀಡಿತು.

------

ಅಂತಿಮವಾಗಿ 53ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು.